ಎದುರಿಗೆ ನಿಂತಿದ್ದ ಶಶಿಧರ. ಸಂಜನಾ ಮುಗುಳುನಕ್ಕಳು. ಆದರೆ ಅವನು ನಗಲಿಲ್ಲ. ಬದಲಿಗೆ ಮುಖ ಬಿಗುವಿನಿಂದಲೇ ಇತ್ತು. ಸಂಜನಾಳೇ ಸುಧಾರಿಸಿಕೊಂಡು,

"ಒಳಗೆ ಬಾ ಶಶಿ" ಎಂದು ಕರೆದಳು.

ಒಳಗೆ ಹೆಜ್ಜೆ ಇಟ್ಟ ಅವನು ಮನೆಯನ್ನೆಲ್ಲಾ ಅವಲೋಕಿಸುತ್ತಾ ಕುರ್ಚಿಯ ಮೇಲೆ ಕುಳಿತುಕೊಂಡ. ಚಂದನಾ ಕೂಡ ಅಮ್ಮನ ಸೀರೆಯನ್ನು ಒಂದು ಕೈಯಲ್ಲಿ ಹಿಡಿದುಕೊಂಡು ಅವಳಿಗೆ ಅಂಟಿಕೊಂಡೇ ನಿಂತಳು. ಶಶಿಧರ ಮಾತು ಹೇಗೆ ಆರಂಭಿಸಬೇಕು ಎಂಬ ಗೊಂದಲದಲ್ಲಿದ್ದಾಗ,

"ಇವಳು ನಮ್ಮ ಮಗಳು ಚಂದನಾ" ಎಂದು ಸಂಜನಾ ತನ್ನ ಹಿಂದೆ ಅವಿತುಕೊಂಡಿದ್ದ ಮಗಳನ್ನು ಮುಂದಕ್ಕೆ ಎಳೆದುಕೊಂಡಳು. ಅದುವರೆಗೂ ಬಿಗಿದುಕೊಂಡಿದ್ದ ಶಶಿಧರನ ಮುಖದಲ್ಲಿ ಬೇಕೋ, ಬೇಡವೋ ಎನ್ನುವಂತೆ ಮಂದಹಾಸ ಮೂಡಿತು. ಎರಡೂ ಕೈಗಳನ್ನು ಚಾಚಿ 'ಬಾ' ಎನ್ನುವಂತೆ ತಲೆಆಡಿಸಿದ. ಅಪರಿಚಿತನ ಬಳಿ ಹೋಗಲು ಹಿಂಜರಿದ ಚಂದನಾ 'ಇಲ್ಲ' ಎನ್ನುವಂತೆ ತಲೆ ಆಡಿಸುತ್ತಾ ಅಮ್ಮನ ಹಿಂದೆ ಸರಿದು ಇಣುಕಿ ನೋಡುತ್ತಾ ನಿಂತಳು. ಚಂದನಾಳಿಗೆ ಶಶಿಧರನ ಪರಿಚಯವಿಲ್ಲದ್ದರಿಂದ ಸಂಜನಾ ಅವಳನ್ನು ಹೆಚ್ಚು ಬಲವಂತ ಮಾಡಲಿಲ್ಲ.

"ನೀರು ಕುಡಿಯುತ್ತೀರಾ" ಸಂಜನಾ ಕೇಳಿದಳು. ಬೇಡವೆನ್ನುವಂತೆ ತಲೆ ಆಡಿಸಿದ ಶಶಿಧರ.

"ಒಂದು ನಿಮಿಷ ಬಂದೆ..." ಎನ್ನುತ್ತಾ ಅಡುಗೆ ಮನೆಗೆ ಹೋದ ಸಂಜನಾ ತಟ್ಟೆಯೊಂದರಲ್ಲಿ ಚಹ ಹಾಗೂ ಬಿಸ್ಕತ್ತುಗಳನ್ನು ತಂದುಕೊಟ್ಟಳು.

ಆಫೀಸು ಕೆಲಸ ಮುಗಿಸಿಕೊಂಡು ಸಂಜೆ ಮನೆಗೆ ಬಂದಾಗ ಹೊಗೆಯಾಡುತ್ತಿರುವ ಚಹಾದ ಜೊತೆ ಬಿಸ್ಕತ್ತುಗಳನ್ನು ತಿನ್ನುವುದು ಶಶಿಧರ ಪ್ರೀತಿಯ ಹವ್ಯಾಸಗಳಲ್ಲೊಂದು. ಅದನ್ನು ಸಂಜನಾ ಮರೆತಿರಲಿಲ್ಲ. ಶಶಿಧರ ಒಂದೆರಡು ಬಿಸ್ಕತ್ತುಗಳನ್ನು ತಿಂದು ಚಹಾ ಹೀರತೊಡಗಿದ. ಶಶಿಧರ ಚಹಾದ ಬಗ್ಗೆ ಏನಾದರೂ ಹೇಳುತ್ತಾನೆ ಎಂದುಕೊಂಡಿದ್ದ ಸಂಜನಾಳಿಗೆ ನಿರಾಸೆಯಾಯ್ತು. ಶಶಿಧರ ಚಹ ಹೀರುವ 'ಸೊರ್, ಸೊರ್' ಎಂಬ ಶಬ್ದ ಬಿಟ್ಟರೆ ಇಡೀ ಮನೆ ಮೌನವಾಗಿತ್ತು. ಈ ಮೌನ ಸಂಜನಾಳಿಗೆ ಅಸಹನೀಯವಾಯ್ತು. ಟೀವಿಯನ್ನಾದರೂ ಹಾಕಿದರೆ ಕಡೇ ಪಕ್ಷ ತಮ್ಮಿಬ್ಬರ ಮಧ್ಯೆ ಅದಾದರೂ ಶಬ್ದ ಮಾಡುತ್ತಾ ಮೌನವನ್ನು ಹೋಗಲಾಡಿಸಿ ವಾತಾವರಣವನ್ನು ಬದಲಾಯಿಸುತ್ತದೆ ಎಂದುಕೊಂಡಳು. ಹಿಂದೆಯೇ ಮತ್ತೊಂದು ಯೋಚನೆಯೂ ಬಂತು. ಶಶಿಧರ ಟೀವಿ ನೋಡುತ್ತಾ ಕುಳಿತುಬಿಟ್ಟರೆ ತಾನು ಆಡಬೇಕೆಂದಿರುವ ಮಾತುಗಳೆಲ್ಲಾ ತನ್ನೊಳಗೇ ಉಳಿದುಬಿಡುತ್ತವೆ.

ಅಷ್ಟರಲ್ಲಿ ಖಾಲಿ ಲೋಟವನ್ನು ಟೀಪಾಯಿಯ ಮೇಲಿಡುತ್ತಾ, "ಹೇಗಿದ್ದೀಯ ಸಂಜನಾ" ಎಂದು ಗಂಭೀರವಾಗಿ ಮೆಲ್ಲಗೆ ಕೇಳಿದ.

ಅಬ್ಬಾ! ಅಂತೂ ನನ್ನ ಬಗ್ಗೆ ವಿಚಾರಿಸಿದನಲ್ಲಾ ಎಂಬ ಸಮಾಧಾನ. ಸಂತಸದಿಂದ ಅತ್ತುಬಿಡಬೇಕೆನಿಸಿತು. ಕಣ್ಣಾಲಿಗಳಲ್ಲಿ ನೀರು ತುಂಬಿಕೊಂಡಿತು.

"ಹ್ಞೂಂ... ಹೀಗಿದ್ದೀನಿ ನೋಡು" ಎಂದವಳಿಗೆ ಸಹನೆ ತಪ್ಪಿಹೋಯ್ತು. ಕೋಪ, ಉದ್ವೇಗ ಹತ್ತಿಕ್ಕಿಕೊಳ್ಳಲಾಗಲಿಲ್ಲ.

"ಏಕಾ ಏಕಿ ಏಕೆ ಹಾಗೆ ಮನೆ ಬಿಟ್ಟು ಹೋದೆ ಶಶಿ? ನನ್ನ ಮಡಿಲಲ್ಲಿ ಎಂಟು ತಿಂಗಳ ಹಸುಳೆ. ನಿನ್ನನ್ನೇ ನಂಬಿಕೊಂಡಿದ್ದ ನನಗೆ ಯಾವ ಆಧಾರವೂ ಇರಲಿಲ್ಲ. ಅದ್ಹೇಗೆ ನೀನು ನನ್ನೊಬ್ಬಳನ್ನೇ ಒಂಟಿಯಾಗಿ ನಡುನೀರಿನಲ್ಲಿ ಕೈ ಬಿಟ್ಟು ಹೋದೆ? ನಾನೊಬ್ಬಳು ಹೆಣ್ಣು, ನನ್ನ ಮುಂದಿನ ಭವಿಷ್ಯ